ಅಧ್ಯಕ್ಷರು: ಜಿರೋ ಅವರ್ ಇನ್ನೂ ಕ್ಲೋಸ್ ಆಗಿಲ್ಲ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಎರಡನೇ ಸಾರಿ ನನಗೆ ಚಿಕ್ಕೋಡಿ ಜಿಲ್ಲೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದನೆಗಳನ್ನು ಅರ್ಪಿಸಿ....

ಅಧ್ಯಕ್ಷರು: ಮಾತನಾಡುವ ಹಾಗಿಲ್ಲ. ಪ್ರಸ್ತಾಪ ಮಾಡುವುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ನಿನ್ನೆ ನನ್ನ ಕಡೆಯಿಂದ ಮಾತನಾಡುವಾಗ ಏನಾದರೂ ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಅಮವಾಸ್ಯೆಗೋ ಹುಣ್ಣಿಮೆಗೋ ಒಮ್ಮೆ ಮಾತನಾಡುವವರು ನಾವು...

ಅಧ್ಯಕ್ಷರು: ನನ್ನ ಸಮಸ್ಯೆ ಏನು ಎಂದರೆ, ಅಮವಾಸ್ಯೆ, ಹುಣ್ಣಿಮೆ ದಿವಸ ನಾನು ಸರಿಯಾಗಿ ಇರುವುದಿಲ್ಲ. ಬೇರೆ ದಿವಸ ಎಲ್ಲಾ ನಾನು ಚೆನ್ನಾಗಿ ಇರುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿನ್ನೆ ದಿವಸ ಹಾಗಿದ್ದಿರಿ. ಇವತ್ತು ಏನೂ ತೊಂದರೆ ಇಲ್ಲ.

(ಘ) ಚಿಕ್ಕೋಡಿಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸುವ ಬಗ್ಗೆ:

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ದಯವಿಟ್ಟು ನಾವು ಮಾತನಾಡುವಾಗ ಎದ್ದರೆ ನಮಗೆ ಸಹಕಾರ ಕೊಡಬೇಕು, ನಮ್ಮ ರಕ್ಷಣೆಗೆ ಬರಬೇಕು ಎಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಚಿಕ್ಕೋಡಿ ಜಿಲ್ಲೆ ಆಗಬೇಕು ಎಂದು ಎರಡು-ಮೂರು ತಾಲ್ಲೂಕಿನ ರಾಯಭಾಗ್, ಚಿಕ್ಕೋಡಿ, ಅಥಣಿ ತಾಲ್ಲೂಕಿನ ಎಲ್ಲಾ 12 ಲಕ್ಷ ಜನರು ಇವತ್ತು ಸತ್ಯಾಗ್ರಹ ಮಾಡುತ್ತಿದ್ದಾರೆ. ನಿನ್ನೆ ಅಂಗಡಿಗಳನ್ನು ಮುಚ್ಚಿದ್ದಾರೆ. ರಸ್ತೆಗಳನ್ನು ಬಂದ್ ಮಾಡಿದ್ದಾರೆ. ಇವತ್ತು ನ್ಯಾಷನಲ್ ಹೈವೇ ರಸ್ತೆಯನ್ನು ಸಹ ಬಂದ್ ಮಾಡುವಂಥ ಪ್ರಸಂಗ ಬಂದಿದೆ. ಆಮೇಲೆ ಚಿಕ್ಕೋಡಿ ಜಿಲ್ಲೆಯ ಹೋರಾಟ ಸಮಿತಿಯ ಅಧ್ಯಕ್ಷರಾದ ಕಿವುಡ ವಕೀಲರು ಮತ್ತು ಚಿಕ್ಕೋಡಿ ತಾಲ್ಲೂಕಿನ ಶಾಸಕರಾದ ಶ್ರೀ ಬಾಳಾಸಾಹೇಬ ವಡ್ಡರ್ ಕೂಡ ಅಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ. ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇವತ್ತಿನ ದಿವಸ ಉಪಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ದಯವಿಟ್ಟು ಚಿಕ್ಕೋಡಿ ಜಿಲ್ಲೆ ಮಾಡಿದರೆ ಮಹಾಜನ್ ವರದಿಗೆ ಏನೂ ಸಂಬಂಧ ಬರುವುದಿಲ್ಲ. ಮಹಾಜನ ವರದಿ ಜಾರಿಗೆ ಬಂದರೂ ಕೂಡ ಚಿಕ್ಕೋಡಿ ತಾಲ್ಲೂಕು, ರಾಯಭಾಗ ತಾಲ್ಲೂಕು, ಅಥಣಿ, ತಾಲ್ಲೂಕು-ಈ ಮೂರು ತಾಲ್ಲೂಕುಗಳು ಏನೂ ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ. ಈ ದೃಷ್ಟಿಯಿಂದ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ನಾವು ಜಿಲ್ಲೆ ಮಾಡಬೇಕಾದರೆ ಹಣಕಾಸಿನ ತೊಂದರೆಯಾಗಬಾರದು,

ಸರ್ಕಾರದ ಮೇಲೆ ಹೊರೆ ಬೀಳ ಬಾರದು ಎಂದು ಹೇಳಿ. ಈಗಾಗಲೇ ನಮ್ಮ ಚಿಕ್ಕೋಡಿಯಲ್ಲಿ ಡಿ.ವೈ.ಎಸ್.ಪಿ ಆಫೀಸು ಇದೆ, ಅಸಿಸ್ಟೆಂಟ್ ಕಮೀಷನರ್ ಅವರ ಆಫೀಸು ಇದೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಇ.ಬಿ.ಅವರ ಆಫೀಸು ಇದೆ. ಜಿಲ್ಲೆ ಬೇಕಾದಂಥ ಎಲ್ಲಾ ಆಫೀಸುಗಳು ನಮ್ಮಲ್ಲಿ ಇರುವುದರಿಂದ ಜಿಲ್ಲೆ ಆಗುವುದಕ್ಕೆ ಇದರಿಂದ ಸರ್ಕಾರದ ಮೇಲೆ ಹೊರೆ ಬೀಳುವುದಿಲ್ಲ. ಈ ದೃಷ್ಟಿಯಿಂದ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಚಿಕ್ಕೋಡಿ ಜಿಲ್ಲೆ ಆಗುವವರೆಗೆ ನಾನು ಧರಣ ಮಾಡಬೇಕೆಂದು ಹೇಳಿ....

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಬಿ.ಜೆ.ಪಿ. ಎಂದೂ ಸಹ ಚಿಕ್ಕೋಡಿ ಜಿಲ್ಲೆ ಆಗುವುದಕ್ಕೆ ವಿರೋಧ ಮಾಡಿಲ್ಲ. ಇವತ್ತೇ ಸರ್ಕಾರ ಘೋಷಣೆ ಮಾಡಿದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಅದು ಹೇಗೋ ಏನೋ ಗೊತ್ತಿಲ್ಲ, ಪತ್ರಿಕೆಗಳ ಮುಖಪುಟಗಳಲ್ಲಿ ಬರೆದಿದ್ದಾರೆ. ಯಡಿಯೂರಪ್ಪನವರು, ಬಿ.ಜೆ.ಪಿ.ಯವರು ಚಿಕ್ಕೋಡಿ ಜಿಲ್ಲೆ ಮಾಡುವುದನ್ನು ವಿರೋಧ ಮಾಡಿದರು ಎಂದು ಬಂದಿದೆ. ಖಂಡಿತ ಹಾಗೆ ಇಲ್ಲ. ಅಲ್ಲಿ ಜಿಲ್ಲೆ ಆಗುವುದಕ್ಕೆ ಎಲ್ಲಾ ಅನುಕೂಲತೆಗಳೂ ಇವೆ. ಉಪಮುಖ್ಯಮಂತ್ರಿಗಳು ಈಗಲೇ ಘೋಷಣೆ ಮಾಡಲಿ, ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ನಮ್ಮದೇನೂ ಅಭ್ಯಂತರವಿಲ್ಲ. ದಯಮಾಡಿ ನಮ್ಮ ಹೆಸರು ಅಲ್ಲಿ ಬರುವಂಥ ಅವಶ್ಯಕತೆ ಇಲ್ಲ. ಮಹಾಜನ್ ಆಯೋಗದ ವರದಿ ವಿಷಯ ಬೇರೆ ಆಗುತ್ತದೆ. ಅದನ್ನು ಯಾವರೀತಿ ಬೇಕೋ ಆ ರೀತಿ ಹ್ಯಾಂಡಲ್ ಮಾಡಿ. ಆದರೆ ನಮ್ಮನ್ನು ಇದರಲ್ಲಿ ತರಬೇಡಿ.

ಶ್ರೀ ವಾಟಾಳ್‌ನಾಗರಾಜ್: ಇದರಲ್ಲಿ ಯಾರದ್ದೂ ವಿರೋಧ ಇಲ್ಲ. ತಪ್ಪು ಅಭಿಪ್ರಾಯ ಬರುತ್ತಿದೆ. ಮಹಾಜನ್ ಆಯೋಗದ ವರದಿಯಿಂದ ಅಪಾಯ ಕಾದಿದೆ ಎನ್ನುವುದೊಂದು ಬಿಟ್ಟರೆ ಈ ಜಿಲ್ಲೆ ಬಗ್ಗೆ ಯಾರದ್ದೂ ವಿರೋಧ ಇಲ್ಲ. ಇದರಲ್ಲಿ ಬೇರೆಬೇರೆ ವ್ಯಾಖ್ಯಾನ ಆಗುವುದು ಬೇಡ. ಬೆಳಗಾವಿ ಜಿಲ್ಲೆ ವಿಭಜನೆ ಮಾಡುವುದರಿಂದ ಮಹಾಜನ್ ವರದಿ ಮತ್ತು ಮರಾಠಿಯವರಿಗೆ ಒಂದು ಜಿಲ್ಲೆ ಆಗಿಹೋಯಿತು ಎಂಬ ಅಪಾಯ ಇದೆ.

ಅಧ್ಯಕ್ಷರು: ಆಯಿತು. ಗೊತ್ತಾಗಿದೆ...

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಈಗ ಜಮಖಂಡಿ ಜಿಲ್ಲೆಯಾಗಬೇಕು ಎಂದು...

ಅಧ್ಯಕ್ಷರು: ನಿಮ್ಮ ಗೆಳೆಯರೂ ಮಾತನಾಡಲಿ. ಸುಭಾಶ್ ಜೋಶಿ....

ಶ್ರೀ ಸುಭಾಶ್ ಶ್ರೀಧರ್ ಜೋಷಿ: ಚಿಕ್ಕೋಡಿ ಜಿಲ್ಲೆಯದ್ದು ವಿರೋಧ ಇಲ್ಲ. ಇಂಟಲಿಜೆನ್ಸ್ ರಿಪೋರ್ಟ್ ಪ್ರಕಾರ ಚಿಕ್ಕೋಡಿ ಜಿಲ್ಲೆ ಮಾಡಬೇಕು ಎಂಬ ವರದಿ ಇದೆ.

ಮಹಾಜನ್ ಅವಾರ್ಡ್‌ಗೂ ಮತ್ತು ಚಿಕ್ಕೋಡಿ ಜಿಲ್ಲೆಗೂ ಏನೇನೂ ಸಂಬಂಧ ಇಲ್ಲ. ಅದಕ್ಕೆ ಇವತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲಿ ಘೋಷಣೆ ಮಾಡಿ ಚಿಕ್ಕೋಡಿ ಜಿಲ್ಲೆಯನ್ನು ಮಾಡಬೇಕು. ಮತ್ತೆ ನಮ್ಮ ಸನ್ಮಾನ್ಯ ಸದಸ್ಯರಾದ ಶ್ರೀ ಬಾಳಾಸಾಹೇಬ ವಡ್ಡರ್ ಅವರದ್ದು ಇವತ್ತು ಆಮರಣ ಉಪವಾಸದ್ದು ನಾಲ್ಕನೇ ದಿನ. ಅದಕ್ಕೆ ಸನ್ಮಾನ್ಯ ಜಿಲ್ಲಾ ಮಂತ್ರಿಗಳಾದ ಶ್ರೀ ಉಮೇಶ್ ಕತ್ತಿಯವರು ಚಿಕ್ಕೋಡಿಗೆ ಹೋಗಿ ಅವರಿಗೆ ವಿನಂತಿ ಮಾಡಿ ಉಪವಾಸವನ್ನು ವಿತ್‌ಡ್ರಾ ಮಾಡುವುದಕ್ಕೆ ಹೇಳಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

(ಚ) ಗೋಕಾಕ್ ಜಿಲ್ಲೆಯನ್ನಾಗಿ ಮಾಡುವ ಬಗ್ಗೆ.

+ ಶ್ರೀ ಚಂದ್ರಶೇಖರ ಸದಾಶಿವ ನಾಯಕ್ (ಗೋಕಾಕ್): ಮಾನ್ಯ ಅಧ್ಯಕ್ಷರೇ, ಗೋಕಾಕ್ ನಗರ ಶ್ರೀ ಗದ್ದೇಗೌಡರ ಸಮಿತಿಯೊಳಗೆ ಇದು ಜಿಲ್ಲೆ ಆಗಬೇಕು ಎಂದು ಇದೆ. ಕನ್ನಡ ಚಳುವಳಿಗಾರರು ಮಹಾಜನ ವರದಿ ಜಾರಿಗೆ ಆಗುವತನಕ ಇದನ್ನು ತರಬೇಡಿ ಎನ್ನುವ ಮಾತನ್ನು ಹೇಳಿದ್ದಾರೆ. ಬೆಳಗಾವಿ ಒಳಗೆ ಇದ್ದಂಥ ಕನ್ನಡಿಗರೇ ಒಂದಾಗಿಲ್ಲ. ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ತಿಳಿಸಿದ್ದೇನೆ. ಮಾಲತೇಶ ನಗರದಲ್ಲಿ 80 ಪರ್ಸೆಂಟ್ ಜನ ಕನ್ನಡಿಗರು ಇದ್ದಾರೆ. ಅಲ್ಲಿ ಹೋದ ಸಾರಿ ಎಂ.ಇ.ಎಸ್.ನವರು ಆರಿಸಿ ಬಂದರು. ಏಕೆಂದರೆ ನಮ್ಮಲ್ಲಿ ಆರು ಜನರು ನಿಂತುಬಿಟ್ಟರು. ಎಂ.ಇ.ಎಸ್.ನವರು ಒಬ್ಬರನ್ನೇ ನಿಲ್ಲಿಸುತ್ತಾರೆ. ಕನ್ನಡದವರಾದ ನಮ್ಮವರು ಆರಾರು ಜನ ನಿಲ್ಲುತ್ತಾರೆ. ಇದು ಕಾರ್ಪೊರೇಷನ್ ಒಳಗೂ ನಡೆಯುತ್ತದೆ. ಆಮೇಲೆ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗುತ್ತದೆ ಎನ್ನುವುದು ಇದು ಒಂದು ಭ್ರಮೆ. ಸೊಲ್ಲಾಪುರ ಅಕ್ಕಲಕೋಟೆ ಬರುತ್ತದೆ ಎನ್ನುವಂಥದ್ದರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಆದರೆ ಬೆಳಗಾವಿ ಹೋಗುತ್ತದೆ ಎಂದರೆ ಎಷ್ಟು ಬೇಗ ಹೋಗುತ್ತದೆ, ಯಾವಾಗ ಹೋಗುತ್ತದೆ ಎಂಬುದನ್ನು ಯಾರೂ ಹೇಳುತ್ತಾ ಇಲ್ಲ. ಹೇಗೆ ಹೋಗುತ್ತದೆ? ಆಮೇಲೆ ಗೋಕಾಕ್ ಜಿಲ್ಲೆ ಆಗುವುದರಿಂದ ಮಹಾಜನ್ ವರದಿ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಏಕೆ ಆಗುವುದಿಲ್ಲ ಎಂದರೆ ಈ ಮಹಾಜನ್ ವರದಿ ಪ್ರಕಾರ ಗೋಕಾಕ್, ಮತ್ತು ಸವದತ್ತಿ, ರಾಮದುರ್ಗದೊಳಗೆ ಯಾವುದೇ ಮಹಾರಾಷ್ಟ್ರದೊಳಗೆ ಸೇರತಕ್ಕಂಥ ಭಾಗಗಳು ಇಲ್ಲ. ಇದನ್ನು ಎಲ್ಲಾ ಜನತಾದಳ ಶಾಸಕರು ಸೇರಿಕೊಂಡು ಮೀಟಿಂಗ್ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಮುಖಾಂತರ ನಾವು ಒಪ್ಪಿಗೆ ಪಡೆದು ಆ ನಿರ್ಣಯವನ್ನು ಕೈಗೊಂಡಿತ್ತು. ಆದರೆ ಈಗ ಕೆಲವು ಜನ ಇದಕ್ಕೆ ಹಿತಾಸಕ್ತಿ ಬಯಸುವುದು ಬಿಟ್ಟು ಈ ಜಿಲ್ಲೆ ಪುನರ್‌ವಿಂಗಡಣೆ ಆಗಬಾರದು ಎನ್ನುವಂಥ ವಿಚಾರವನ್ನು ಎತ್ತಿದ್ದಾರೆ. ಅದಕ್ಕಾಗಿ ಗೋಕಾಕ್ ಜಿಲ್ಲೆಯಾಗಿ ಮಾಡಬೇಕು ಎನ್ನುವ ವಿಚಾರವನ್ನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

+ ಶ್ರೀ ವಿ.ಎಸ್.ಕೌಜಲಗಿ: ಮಾನ್ಯ ಅಧ್ಯಕ್ಷರೇ, ಈ ಊಹಾಪೋಹದ ಬಿರುಗಾಳಿ